ರಮಾನಂದರೆಡ್ಡಿ, ಮದಕರಿಪುರ
ಮನೆಯಲ್ಲಿ ನಾಯಿ ಇಲ್ಲದಿದ್ದರೂ ಹೊರಗೆ ನಾಯಿ ಇದೆ ಎಚ್ಚರಿಕೆ ಎಂಬ ಫಲಕ ಇದೆಯಲ್ಲಾ?




ಆಕಾರದಲ್ಲಿ ಇಲ್ಲದಿದ್ದರೂ ಆಚಾರದಲ್ಲಿ ಇವೆಯಂತೆ.

ಮಲ್ಲಿಕಾರ್ಜುನ, ಸುರಧೇನುಪುರ
ಧೀಮಂತಿಕೆ ಮೇಲೋ, ಶ್ರೀಮಂತಿಕೆ ಮೇಲೋ, ಎರಡೂ ಫೀಮೇಲೋ?
ಧೀಮಂತಿಕೆಯ ಸರ್ಟಿಫಿಕೇಟ್ ಫೀ, ಶ್ರೀಮಂತಿಕೆಯ ಆಡಿಟರ್ಸ್ ಫೀ ಎರಡೂ ಮೇಲೋ ಮೇಲು.

ವಿ. ಹೇಮಂತಕುಮಾರ್, ಬೆಂಗಳೂರು
ಖಾಸಗಿ ಶಾಲೆಯನ್ನು ಕ್ಯಾಶ್‌ಗೀ ಶಾಲೆ ಎಂದೂ ಕರೆಯಬಹುದಲ್ಲವೆ?
ಧಾರಾಳವಾಗಿ. ಈಗ ಸರಸ್ವತಿಯ ಕೈ ಹಿಡಿಯಬೇಕಾದರೆ ಲಕ್ಷ್ಮಿಯ ಕೈ ಬಿಡಲೇಬೇಕು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನಸ್ಸು ಎಂಬ ಕನ್ನಡಿ ಒಡೆದರೆ ಏನಾಗಬಹುದು?



ವಿರಹ, ವಿಷಾದ ಗೀತೆಗಳಿಗೆ ಬೇಡಿಕೆ ಬರುವುದು.

ಸುಧೀಂದ್ರ, ಬೆಂಗಳೂರು
ನೆರೆಮನೆಯಲ್ಲಿ ಸುಂದರಿ, ಶಿಸ್ತಿನ ಅಪ್ಪ, ಗಯ್ಯಾಳಿ ಅಮ್ಮ, ಭಯಂಕರ ನಾಯಿ ಇವೆ. ಯಾರನ್ನು ಮೊದಲು ಫ್ರೆಂಡ್ ಮಾಡಿಕೊಳ್ಳಲಿ?
ಗಯ್ಯಾಳಿಯನ್ನು! ಅವಳ ಅಪ್ಪ, ನಾಯಿ, ಅಮ್ಮ, ಸುಂದರಿ ಅವರೆಲ್ಲರ ಮಾತಿಗೆ ಒಲಿದಾಳು.

ಬಿ.ಆರ್. ಉಷಾ, ಬೆಂಗಳೂರು
ಸಾವಿಗೆ ಔಷಧಿ ಏಕೆ ಕಂಡುಹಿಡಿದಿಲ್ಲ?
ಹುಟ್ಟೇ ಸಾವಿಗೆ ಔಷಧಿ. ಹೆಚ್ಚುತ್ತಿರುವ ಜನಸಂಖ್ಯೆ ಈ ಔಷಧಿ ವಿಪುಲವಾಗಿ ಬಳಕೆಯಲ್ಲಿರುವುದರ ಸೂಚಕ.

ಎಸ್.ಸಿ. ರಮೇಶ್, ಮೈಸೂರು
ಕಾವೇರಿಯನ್ನು ಮೇಕೆ ದಾಟುವುದೋ, ಟಗರು ದಾಟುವುದೋ ಹೇಳದಿದ್ದರೆ ನಿನ್ನ ತಲೆ ಸಾವಿರ ಹೋಳಾಗುವುದು!
ಎರಡೂ ಅಲ್ಲ. ತೋಳ ದಾಟುತ್ತದೆ. ಅತ್ತಣಿತ್ತಣ ಕುರಿಗಳು ಬಲಿಯಾಗುತ್ತವೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಯೋಗ್ಯರೆಂದು ನಂಬಿರುವವರ ಯೋಗ್ಯತೆ ತಿಳಿಯುವುದು ಯಾವಾಗ?
ಅಯೋಗ್ಯರೊಡನೆ ವಾದಕ್ಕೆ ಇಳಿದಾಗ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ
ಏರುವಾಗಿನ ಕಷ್ಟ ಇಳಿಯುವಾಗ ಇರಲ್ಲ?
ಇರತ್ತೆ. ಜೀವನದ ಎಲ್ಲ ಕಷ್ಟಗಳನ್ನು ಅನುಭವಿಸಿದ ನಂತರವೇ ಗೋರಿಗೆ ಇಳಿಯಲು ಸಾಧ್ಯ.

ಎಂ.ಸಿ. ಧನ್ಯತಾ, ಬೆಂಗಳೂರು
ಸವಿಮಾತಿಗೂ ಕಿವಿಮಾತಿಗೂ ಏನು ವ್ಯತ್ಯಾಸ?
ಕಿವಿಮಾತನ್ನು ಗಟ್ಟಿಯಾಗಿ ಹೇಳುತ್ತಾರೆ; ಸವಿಮಾತನ್ನು ಕಿವಿಯಲ್ಲಿ ಹೇಳುತ್ತಾರೆ.

ಬಿ.ವಿ. ರಾಮಸ್ವಾಮಿ, ಭೀಮನಕಟ್ಟೆ
ಆಗುತ್ತಿರುವ ಅನಾಹುತ ನೋಡಿದರೆ ಪ್ರಕೃತಿಯು ದೇವರೋ ದೆವ್ವವೋ ಎಂಬ ಅನುಮಾನ ಬರುತ್ತಲ್ಲಾ?
ದೇವರನ್ನು ದೆವ್ವವಾಗಿಸಿದ್ದೇ ನಾವು ಎನ್ನುವುದರಲ್ಲಿ ಅನುಮಾನವೂ ಇಲ್ಲವಲ್ಲ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಹೆಣ್ಣಿಗಾಗಿ ಸತ್ತವರು ಕೋಟಿ ಎಂಬ ಶರಣರ ಮಾತು ಧಾರಾವಾಹಿಗಳಲ್ಲಿ ಉಲ್ಟಾ ಆಗಿದೆಯಲ್ಲಾ?
ದಾ–ದಾಂಧಲೆ; ರಾ–ರಾಡಿ; ವಾ–ವಾಕರಿಕೆ; ಹಿ–ಹಿಕ್ಮತ್ತುಗಳ ಕಂತೆಯಲ್ಲಿ ಒಳಿತು ಹುಡುಕುವುದೇ ದಡ್ಡತನ.

ಮಹಾವೀರ ಕಾಸರ, ಶಿವಮೊಗ್ಗ
ಖಾರ ತಿಂದರೆ ಕಣ್ಣಲ್ಲೇಕೆ ನೀರು?
ಅದು ಹೊಟ್ಟೆ ಪಡುತ್ತಿರುವ ಅವಸ್ಥೆಗೆ ಕಣ್ಣು ಸಂತಾಪ ಸೂಚಿಸುವ ಪರಿ.

## ವಾರದ ಪ್ರಶ್ನೆ

ಶೃತಿ ರಿಗ್ರೆಟ್ ಐಯ್ಯರ್, ನ್ಯೂಜರ್ಸಿ
ಇಂದಿನ ಯುವಕರು ಋಷಿಗಳಂತೆ ಜಡೆ ಇಟ್ಟುಕೊಳ್ಳುವುದೇಕೆ?
ಮೇನಕೆಯೋ ರಂಭೆಯೋ ಕುಣಿಕುಣಿದು ಬಂದಾಳೆಂದು.

ಪಿ.ಜೆ. ರಾಘವೇಂದ್ರ, ಮೈಸೂರು
ಸಬ್ ರಿಜಿಸ್ಟ್ರಾರ್‌ಗಳೇಕೆ ಪ್ರಮೋಷನ್ ಬಯಸೋಲ್ಲ?
ಇರುವ ಜಾಗವೇ 'ತೃಪ್ತಿಕರ'ವಾಗಿರುವುದರಿಂದ.

ಆರ್. ಮಧುಸೂದನ್, ಹಾಸನ
'ವಿದ್ಯಾ ದದಾತಿ ವಿನಯಂ' ಎನ್ನುತ್ತಾರೆ. ಆದರೆ ಬಹಳಷ್ಟು ವಿದ್ಯಾವಂತರಿಗೆ ವಿನಯವೇ ಇರುವುದಿಲ್ಲವಲ್ಲ?
ಅವರದು ದುರ್ವಿದ್ಯೆ. ದುರ್ವಿದ್ಯಾ ದದಾತಿ ದುರ್ವಿನಯಂ.

ಪಿ. ಜಯವಂತ ಪೈ, ಕುಂದಾಪುರ
ಹಣ್ಣಿಗೂ ಹೆಣ್ಣಿಗೂ ವ್ಯತ್ಯಾಸವೇನು?



ಕಿಡಿಗೇಡಿಗಳು ಹಣ್ಣಿಗೆ ಕಲ್ಲು ಹೊಡೆಯುತ್ತಾರೆ, ಹೆಣ್ಣಿಗೆ ಕಣ್ಣು ಹೊಡೆಯುತ್ತಾರೆ.

ಹೆಚ್.ವಿ. ರಂಗನಾಥ, ಬೆಂಗಳೂರು
ಕೊಳಚೆ ನೀರು ಹರಿಯುವ ಚರಂಡಿಗೆ 'ರಾಜಕಾಲುವೆ' ಎಂದು ಹೇಳುವುದು ತಪ್ಪಲ್ಲವೆ?
ಊಹೂಂ. ಕೆಲವು ರಾಜರ ಕೊಳಕು ಜೀವನಕ್ಕೆ ಹೋಲಿಸಿದರೆ ಚರಂಡಿ ಶುದ್ಧಾತಿಶುದ್ಧ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಇಂದಿನ ವಾಟ್ಸಾಪ್ ಹರಟೆಗೂ, ಅಂದಿನ ಗೃಹಿಣಿಯರ ಕಟ್ಟೆ ಹರಟೆಗೂ ಏನು ವ್ಯತ್ಯಾಸ?
ಕಟ್ಟೆ ಹರಟೆಯಲ್ಲಿ 'ಫಾರ್ವರ್ಡೆಡ್ ಮೆನಿ ಟೈಮ್ಸ್'ಗಿಂತ ಫ್ರೆಷ್ ಗಾಸಿಪ್‌ಗಳೇ ಹೆಚ್ಚು ಇರುತ್ತಿದ್ದವು.

**ರಾಮ್**

ನೀವೂ ಪ್ರಶ್ನೆ ಕಳಿಸಿ: editorsu@sudha.co.in